the management of a concern which exclusively belongs to the Government of India ? In other words, has the Mysore Government any participation in the management of this factory, wherein they can insist that so and so must be employed ? Have they tried to safeguard the interests of the Mysoreans in that way ?

ಶ್ರೀ ವೀರೇಂದ್ರ ಪಾಟೀಲ್.—ಆ ವಿವರ ನನ್ನಲ್ಲಿ ಹತ್ತಿರ ಇಲ್ಲ, ಇಷ್ಟು ಮಾತ್ರ ಹೇಳಬಲ್ಲೆ ಭಾರತ್ ಆರ್ತ್ ಮೂವರ್ಸ್ ಫ್ಯಾಕ್ಟರಿ ಎಲ್ಲಿ ಸ್ಥಾಪನೆ ಮಾಡಬೇಕೆಂಬ ಪ್ರಶ್ನೆ ಬಂದಾಗ ನಮ್ಮ ಮುಖ್ಯ ಮಂತ್ರಿಗಳು ಅದಷ್ಟೂ ಹೆಚ್ಚು ಕೇಂದ್ರದ ಮೇಲೆ ಪ್ರಭಾವ ಬೀರಿ ಇಲ್ಲೇ ಆ ಫ್ಯಾಕ್ಟರಿಯನ್ನು ಹಾಕಬೇಕೆಂದು ಒತ್ತಾಯ ಮಾಡಿದರು. ಅದನ್ನು ಮದರಾಸಿನಲ್ಲಿ ಹಾಕುತ್ತಾರೆ ಎಂಬ ವದಂತಿ ಇತ್ತು. ನಮ್ಮ ಜನಗಳಿಗೆ ಅನುಕೂಲತೆ ಆಗಬೇಕೆಂಬ ದೃಷ್ಟಿಯಿಂದ ಒತ್ತಾಯ ಮಾಡಿ ಆ ಫ್ಯಾಕ್ಟರಿಯನ್ನು ಇಲ್ಲೇ ತೆರೆದಿದ್ದಾರೆ. ಉತ್ತರದಲ್ಲೇ ಹೇಳಿರುವಂತೆ ಎಷ್ಟು ಜನರು ಸೂಟಬಲ್ ಆಗಿದ್ದಾರೆ ಎಷ್ಟು ಜನರಿಗೆ ಎಂಪ್ಲಾಯ್‌ಮೆಂಟ್ ಕೊಡಬೇಕೆಂಬುದು ಇದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿಸಿದ್ದರೂ ಕೂಡ ಆ ಕ್ಯಾಂಡಿಡೇಟ್ಸ್‌ನ್ನು ಕರೆಯದೆ ಬೇರೆ ಮಾರ್ಗಗಳಿಂದ ಕೆಲಸಗಾರರನ್ನು ತೆಗೆದು ಕೊಳ್ಳುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಗಮನಕ್ಕೆ ಬಂದಿಲ್ಲ.

Kondajji Tank in Turvekere Taluk

*Q.—222. Sri M. N. RAMANNA (Turvekere).—

Will the Minister for Public Works be pleased to state :—

(*a*) whether there is any proposal before the Government to increase the capacity of Kondajji Tank in Turvekere Taluk ;

(*b*) if so, the estimated cost of the same ?

A.—Sri ALUR HANUMANTHAPPA (Deputy Minister for Minor Irrigation).—

(*a*) No.

(*b*) Does not aries in view of reply to clause (*a*).

ಶ್ರೀ ಎಂ. ಎನ್. ರಾಮಣ್ಣ.—ಅಂದಾಜು ತಯಾರಾಗಿಲ್ಲ ಎಂದು ಉತ್ತರದಲ್ಲಿ ಹೇಳಿದ್ದೀರಿ, ಅಂದಾಜು ತಯಾರಾಗಿ ಎರಡು ಲಕ್ಷ ರೂಪಾಯಿಗಳಿಗೆ ಡಿಪಾರ್ಟ್‌ಮೆಂಟಿನಲ್ಲಿರುವುದು ನಿಜವೇ ?

†ಶ್ರೀ ಆಲೂರು ಹನುಮಂತಪ್ಪ.—ಕೆರೆಯ ರೆಸ್ಟೊರೇಷನ್‌ಗೆ ಮಾತ್ರ ತಯಾರಾಗಿದೆ, ಕೃಪಾಸಿಟಿ ಇನ್‌ಕ್ರೀಸ್ ಮಾಡುವುದಕ್ಕೆ ತಯಾರಾಗಿಲ್ಲ.

ಶ್ರೀ ಎಂ. ಎನ್. ರಾಮಣ್ಣ.—ತಯಾರಾಗಿರತಕ್ಕ ಅಂದಾಜಾ ಪ್ರಕಾರ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವೇ ?

ಶ್ರೀ ಆಲೂರು ಹನುಮಂತಪ್ಪ.—2 ಲಕ್ಷ 15 ಸಾವಿರ ರೂಪಾಯಿಗಳಿಗೆ ಒಂದು ಅಂದಾಜು ತಯಾರಾಗಿದೆ ಎಕ್ಸಿಕ್ಯೂಟೀವ್ ಇಂಜನಿಯರ್ ಆಫೀಸಿನಲ್ಲಿ ಸ್ಕ್ರುಟಿನಿಯಲ್ಲಿ ಇದೆ.

ಶ್ರೀ ಎಂ. ಎನ್. ರಾಮಣ್ಣ.—ಅದಷ್ಟು ಜಾಗ್ರತೆ ಕೆಲಸ ಶುರು ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಸ್ಕ್ರುಟಿನಿ ಆದಕೂಡಲೇ ತೆಗೆದುಕೊಳ್ಳುವುದನ್ನು ಯೋಚನೆ ಮಾಡುತ್ತೇವೆ.